



ಅರುಣ ಪಿ. ಭಟ್ಟ

## ವಾರಭವಿಷ್ಯ: 19.02.2026ರಿಂದ 25.02.2026ರವರೆಗೆ




ಸ್ವಂತ ವೃತ್ತಿನಿರತರಿಗೆ ಉತ್ತಮವಾದ ದಿನಗಳಿವು. ಉದ್ಯೋಗ ಸ್ಥಳದಲ್ಲಿ ನಿಮ್ಮ ಪಾಲಿನ ಜವಾಬ್ದಾರಿ ಜಾಸ್ತಿ ಆಗಲಿದೆ. ಆದಾಯದಲ್ಲಿ ಹೆಚ್ಚಳ ಆಗುವ ಸಾಧ್ಯತೆಗಳಿವೆ. ಸೇವಾ ವಲಯ ಹಾಗೂ ಉದ್ಯಮ, ವ್ಯಾಪಾರ ಮಾಡುವವರಿಗೆ ಲಾಭ ಹೆಚ್ಚಾಗಲಿದೆ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ತೆಗೆದುಕೊಳ್ಳಿ. ವಿರೋಧಿಗಳು ನಿಮಗೆ ಸಮಸ್ಯೆ ಮಾಡಲು ಪ್ರಯತ್ನಿಸಬಹುದು. ಶುಭದಿನ: 20. ಕನಕಧಾರಾ ಸ್ತೋತ್ರ ಪಠಿಸಿರಿ.

---




ಪ್ರೀತಿಪಾತ್ರರೊಂದಿಗೆ ಉತ್ತಮ ಸಮಯವನ್ನು ಕಳೆಯಲಿದ್ದೀರಿ. ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚು ಸಕ್ರಿಯವಾಗಿ ಪಾಲ್ಗೊಳ್ಳಲಿದ್ದೀರಿ. ಹೆಸರಾಂತ ಸಂಸ್ಥೆಯೊಂದರಲ್ಲಿ ಉದ್ಯೋಗ ದೊರೆಯುವ ಅವಕಾಶ ಇದೆ. ಪದೋನ್ನತಿ ಸಿಗುವ ಯೋಗ ಇದೆ. ಮನೆಗೆ ಅಗತ್ಯ ಇರುವ ವಸ್ತುಗಳನ್ನು ಖರೀದಿ ಮಾಡಲಿದ್ದೀರಿ. ನಿಮ್ಮ ಕೆಲಸ ಸಾಧನೆಯಿಂದ ಪೋಷಕರು ಸಂತೋಷ ಪಡುತ್ತಾರೆ. ಶುಭದಿನ: 23. ಹನುಮಾನ್ ಚಾಲೀಸ್ ಪಠಿಸಿರಿ.

---




ವಿರೋಧಿಗಳಿಗೆ ತಕ್ಕ ಪ್ರತ್ಯುತ್ತರ ನೀಡಲಿದ್ದೀರಿ. ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ಕುಟುಂಬದಲ್ಲಿ ಭಿನ್ನಾಭಿಪ್ರಾಯ ತಲೆದೋರುವ ಸಾಧ್ಯತೆ ಇದೆ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಸಾಧ್ಯತೆ ಇದೆ. ಧಾರ್ಮಿಕ ಆಚರಣೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿದ್ದೀರಿ. ಜವಾಬ್ದಾರಿಯುತ ಕೆಲಸವೊಂದಕ್ಕೆ ನಿಮ್ಮನ್ನು ನೇಮಿಸುವ ಸಾಧ್ಯತೆಗಳಿವೆ. ಶುಭದಿನ: 22. ವಿಷ್ಣು ಸಹಸ್ರನಾಮ ಪಠಿಸಿರಿ.

---




ಸಂಗಾತಿ ಜತೆಗೆ ಬಾಂಧವ್ಯ ಇನ್ನಷ್ಟು ಗಟ್ಟಿ ಆಗಲಿದೆ. ವಿರೋಧಿಗಳು ಸಮಸ್ಯೆ ಮಾಡುವ ಸಾಧ್ಯತೆ ಇದೆ. ದೂರ ಪ್ರಯಾಣ ಮಾಡುವುದಿದ್ದರೆ ಮುಂದಕ್ಕೆ ಹಾಕುವುದು ಒಳಿತು. ವೃತ್ತಿಪರ ಜೀವನದಲ್ಲೂ ಕೆಲವು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಪ್ರೀತಿ ಪ್ರೇಮದಲ್ಲಿ ಇರುವವರಿಗೆ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳು ಎದುರಾಗಬಹುದು. ಅದೃಷ್ಟ ನಿಮ್ಮ ಕೈ ಹಿಡಿಯಲಿದೆ. ಶುಭದಿನ: 19. ಚಂಡಿ ಪಾರಾಯಣ ಮಾಡಿರಿ.

---




ಸಂಬಂಧಿಕರಿಂದ ಪ್ರೀತಿ ವಾತ್ಸಲ್ಯ ದೊರೆಯುತ್ತದೆ. ಹಣಕಾಸು, ವಿದೇಶ ವ್ಯವಹಾರದಲ್ಲಿ ಏಳ್ಗೆ ಇದೆ. ವಿರೋಧಿಗಳಿಂದ ಕಾನೂನು ವ್ಯಾಜ್ಯಗಳು ಎದುರಾಗಬಹುದು. ಈ ವಾರದಲ್ಲಿ ನಿಮ್ಮ ವರ್ಚಸ್ಸು ಬದಲಾಗಲಿದೆ. ಪ್ರಭಾವಿಗಳಾಗಿ ಹೊರಹೊಮ್ಮಲಿದ್ದೀರಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ಆಪ್ತರ ಜತೆಗೆ ಸುಮಧುರವಾದ ಕ್ಷಣಗಳನ್ನು ಕಳೆಯಲಿದ್ದೀರಿ. ಶುಭದಿನ: 25. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.

---




ಕೌಶಲ ಹೆಚ್ಚಾಗಲಿದೆ. ಮಕ್ಕಳಿಗೆ ಸಂಬಂಧಿಸಿದಂತೆ ಶುಭ ಸುದ್ದಿ ಕೇಳಲಿದ್ದೀರಿ. ಆರ್ಥಿಕವಾಗಿ ನಿಮ್ಮ ಸ್ಥಿತಿ ಉತ್ತಮವಾಗಿರುತ್ತದೆ. ಪ್ರೀತಿ ಪ್ರೇಮದಲ್ಲಿ ಇರುವವರಿಗೆ ಅತ್ಯುತ್ತಮವಾದ ಸಮಯ. ಅನುಕೂಲಕರವಾದ ವಾತಾವರಣ ಇರಲಿದೆ. ಕಾನೂನು ವ್ಯಾಜ್ಯಗಳಲ್ಲಿ ಬಹಳ ಎಚ್ಚರಿಕೆಯಿಂದ ಹೆಜ್ಜೆಗಳನ್ನು ಇಡಬೇಕು. ವಿರೋಧಿಗಳಿಂದ ಹಲವು ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ. ಶುಭದಿನ: 25. ಕಾಲಭೈರವನ ಸೇವೆ ಮಾಡಿರಿ.

---




ಕುಟುಂಬದಲ್ಲಿ ಸಂತಸದ ವಾತಾವರಣ ಇರಲಿದೆ. ಈ ಹಿಂದಿನ ಆರೋಗ್ಯ ಸಮಸ್ಯೆಗಳು ಇದ್ದಲ್ಲಿ ಅವುಗಳು ನಿವಾರಣೆ ಆಗುತ್ತವೆ. ವ್ಯಾಪಾರ ವ್ಯವಹಾರಗಳಲ್ಲೂ ಪ್ರಗತಿ ಇದೆ. ಪ್ರೀತಿ ಪ್ರೇಮದಲ್ಲಿ ಇರುವವರಿಗೆ ಸುಮಧುರ ಕ್ಷಣಗಳನ್ನು ಕಳೆಯುವ ಯೋಗ ಇದೆ. ಈ ಹಿಂದಿಗಿಂತ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುತ್ತದೆ. ವಿವಿಧ ಕ್ಷೇತ್ರಗಳಲ್ಲಿ ನಿರೀಕ್ಷಿತ ಫಲಿತಾಂಶ ಸಿಗಲಿದೆ. ಶುಭದಿನ 23. ಲಿಂಗಾಷ್ಟಕ ಪಠಿಸಿರಿ.

---




ಆತ್ಮವಿಶ್ವಾಸ ಹೆಚ್ಚಾಗಲಿದೆ. ಅದೃಷ್ಟ ನಿಮ್ಮ ಕೈ ಹಿಡಿಯಲಿದೆ. ದಾನ ಧರ್ಮ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿದ್ದೀರಿ. ಜೀವನದಲ್ಲಿ ಸಂತೋಷ ಇರಲಿದೆ. ಪೋಷಕರ ಜತೆಗೆ ಸಂತೋಷದ ಸಮಯ ಕಳೆಯಲಿದ್ದೀರಿ. ಮನೆ ಖರೀದಿಗೆ ಪ್ರಶಸ್ತವಾದ ಸಮಯ. ಬೌದ್ಧಿಕ ಸಾಮರ್ಥ್ಯ ವೃದ್ಧಿ ಆಗಲಿದೆ. ವಿರೋಧಿಗಳು ಕಿರಿಕಿರಿ ಉಂಟು ಮಾಡಲಿದ್ದಾರೆ. ಶುಭದಿನ: 22. ಶ್ರೀರಾಮರಕ್ಷಾ ಸ್ತೋತ್ರ ಓದಿರಿ.

---




ಜೀವನದಲ್ಲಿ ಸಂಭ್ರಮದ ವಾತಾವರಣ ಇರಲಿದೆ. ಕುಟುಂಬದಲ್ಲಿ ಒಗ್ಗಟ್ಟು ಹೆಚ್ಚಾಗಲಿದೆ. ಆಸ್ತಿ ವಿಚಾರದಲ್ಲಿ ಶುಭ ಸುದ್ದಿ ಕೇಳುವ ಯೋಗ ಇದೆ. ವಿರೋಧಿಗಳು ನಾನಾ ಬಗೆಯಲ್ಲಿ ಹಿಂಸೆ ನೀಡುವ ಸಾಧ್ಯತೆ ಇದೆ. ಆರೋಗ್ಯ ವಿಚಾರದಲ್ಲಿ ಎಚ್ಚರಿಕೆಯಿಂದ ಇರಬೇಕು. ಸರ್ಕಾರಿ ಖಾಸಗಿ ಸಂಸ್ಥೆಗಳ ಜತೆಗೆ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಇದೆ. ಮನೆ ವಿಚಾರದಲ್ಲಿ ಪ್ರಗತಿ ಇದೆ. ಶುಭದಿನ: 21. ನವದುರ್ಗಾ ಆರಾಧನೆ ಮಾಡಿರಿ.

---




ಆರೋಗ್ಯದಲ್ಲಿ ಸಮಸ್ಯೆಗಳಿದ್ದಲ್ಲಿ ಚೇತರಿಕೆ ಕಾಣಿಸಿಕೊಳ್ಳುತ್ತದೆ. ವ್ಯವಹಾರಗಳನ್ನು ಮಾಡುತ್ತಿರುವವರಿಗೆ ಪ್ರಗತಿಗೆ ಅವಕಾಶ ಇದೆ. ಸ್ಥಿರಾಸ್ತಿಯಲ್ಲಿ ಲಾಭ ಗಳಿಸುವ ಯೋಗ ಇದೆ. ವಿದೇಶಿ ವ್ಯವಹಾರ ಹಾಗೂ ಹೂಡಿಕೆಯಲ್ಲಿ ಸ್ಥಿರ. ವಿರೋಧಿಗಳು ನಿಮ್ಮನ್ನು ಕಾನೂನು ಸಮಸ್ಯೆಗಳಲ್ಲಿ ಸಿಲುಕಿಸಬಹುದು. ಅಧ್ಯಾತ್ಮ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚು ಪಾಲ್ಗೊಳ್ಳಲಿದ್ದೀರಿ. ಶುಭದಿನ: 20. ಶಿವಕವಚ ಪಠಣ ಮಾಡಿರಿ.

---




ಹಣಕಾಸು ಹೂಡಿಕೆಗೆ ಹಲವು ಅವಕಾಶ ದೊರೆಯಲಿವೆ. ಸಾಲ ಮರುಪಾವತಿಗೆ ಪ್ರಾಮಾಣಿಕ ಪ್ರಯತ್ನಪಡುತ್ತೀರಿ. ನಿಮ್ಮ ಸಂಗಾತಿ ನಿರ್ಲಕ್ಷ್ಯ ಮಾಡುತ್ತಿದ್ದಾರೇನೋ ಎಂಬ ಭಾವನೆ ಮೂಡಲಿದೆ. ಇಂಥ ವಿಚಾರಗಳನ್ನು ಬಹಳ ಎಚ್ಚರಿಕೆಯಿಂದ ನಿರ್ವಹಿಸಿ. ನೀವು ಅಂದುಕೊಂಡಂತೆ ಆಸ್ತಿ ವ್ಯವಹಾರಗಳು ನಡೆಯಲಿವೆ. ಧಾರ್ಮಿಕ ಆಚರಣೆಗಳ ಅನುಷ್ಠಾನ ಮಾಡಲಿದ್ದೀರಿ. ಶುಭದಿನ: 21. ಲಲಿತಾ ಸಹಸ್ರನಾಮ ಪಠಿಸಿರಿ.

---




ನಿಮ್ಮ ಆರ್ಥಿಕ ಸ್ಥಿತಿ ಉತ್ತಮವಾಗಲಿದೆ. ಶೈಕ್ಷಣಿಕ, ಬೌದ್ಧಿಕ ವಿಷಯಗಳಲ್ಲಿ ಪ್ರಗತಿ ಕಾಣಲಿದ್ದೀರಿ. ಮಹತ್ವದ ಮಾಹಿತಿ ದೊರೆಯಲಿದೆ. ಮಕ್ಕಳ ವಿಚಾರದಲ್ಲಿ ಶುಭ ಸುದ್ದಿ ಕೇಳುವ ಯೋಗ ಇದೆ. ಎಲ್ಲವೂ ಸರಿಯಾಗಿದೆ ಅಂದುಕೊಳ್ಳುವ ಹೊತ್ತಿಗೆ ಏರಿಳಿತಗಳನ್ನು ಕಾಣಲಿದ್ದೀರಿ. ನೀವು ಅಂದುಕೊಂಡಂತಹ ಗುರಿ ತಲುಪಲು ಸೂಕ್ತ ವಾತಾವರಣ ನಿರ್ಮಾಣ ಆಗಲಿದೆ. ಶುಭದಿನ: 24. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.